RNU AIR DHARWAD

# OCTOBER 17, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಮಂಗನ ಕಾಯಿಲೆ;** ಎರಡನೇ ಹಂತದ ಲಸಿಕೆ ಪೂರೈಕೆಗೆ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಗೆ ಮನವಿ – ದಿನೇಶ್ ಗುಂಡೂರಾವ್.
- **"ಉತ್ತಮ ಜೀವನ ಮತ್ತು ಭವಿ ೈಕ್ಕಾಗಿ,** ಆಹಾರದ ಹಕ್ಕು" ಧ್ಯೇಯದೊಂದಿಗೆ, ವಿಶ್ವ ಆಹಾರ ದಿನಾಚರಣೆ.
- **ಕೊಡಗಿನ ತಲಕಾವೇರಿ ಕ್ಷೇತ್ರದಲ್ಲಿ,** ಇಂದು ಪವಿತ್ರ ತೀರ್ಥ ಉದ್ಭವ.
- **ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಇಂದು,** ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ.
- **ಚಿತ್ರದುರ್ಗದಲ್ಲಿ ರಾಜ್ಯ ಮಟ್ಟದ ಜುಡೋ ಪಂದ್ಯ;** ರಾಷ್ಟ್ರ ಮಟ್ಟಕ್ಕೆ 19 ಜುಡೋಪಟುಗಳು ಆಯ್ಕೆ.

<><><>

**ಈಗ ವಾರ್ತೆಗಳ ವಿವರ**

<><><>

**ಕಿತ್ತೂರು ಸಂಸ್ಥಾನದ ವೀರ ರಾಣಿ ಚನ್ನಮ್ಮ ಅವರ,** 1824ರ ಮೊಟ್ಟ ಮೊದಲ ಬ್ರಿಟಿ ´ರ ವಿರುದ್ಧ ಸಂಗ್ರಾಮದ ವಿಜಯಕ್ಕೆ, ಇದೇ 23ಕ್ಕೆ 200 ವ ´ƒ ಪೂರ್ಣಗೊಳ್ಳಲಿವೆ. ಐತಿಹಾಸಿಕ ವಿಜಯದ ಶಾಶ್ವತ ಸ್ಮರಣೆಗಾಗಿ, ರಾಣಿ ಚನ್ನಮ್ಮ ಅವರ ಅಂಚೆ ಚೀಟಿಯನ್ನು ಬಿಡುಗಡೆ ಮಾಡುವಂತೆ, ಕಿತ್ತೂರು ಕರ್ನಾಟಕ ನಿಯೋಗದ ಪ್ರಮುಖರು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೇತೃತ್ವದಲ್ಲಿ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ಮನವಿ ಸಲ್ಲಿಸಿದ್ದಾರೆ. ರಾಜ್ಯಸಭೆ ಸಂಸದ ಈರಣ್ಣ ಕಡಾಡಿ, ಲೋಕಸಭೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಅರವಿಂದ ಬೆಲ್ಲದ, ನಿಯೋಗದಲ್ಲಿದ್ದರು.

<><><>

**ಕಿತ್ತೂರು ರಾಣಿ ಚನ್ನಮ್ಮ** ವಿಜಯ ಜ್ಯೋತಿ ಯಾತ್ರೆ ರಥಕ್ಕೆ, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಸ್ವಾಗತಿಸಿ, ಪುಷ್ಪಾರ್ಪಣೆ ಮೂಲಕ, ಗೌರವ ಸಲ್ಲಿಸಿದರು. ಬೆಳಗಾವಿಗೆ ಆಗಮಿಸಿದ ರಥಕ್ಕೆ, ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಹಾಗೂ ಗಣ್ಯರು ಗೌರವ ಸಮರ್ಪಿಸಿದರು.

<><><>

**ಕೋಟಿ ವೃಕ್ಷ ಅಭಿಯಾನದಡಿ** ವಿಜಯಪುರ ಜಿಲ್ಲೆ, ಮಮದಾಪುರದ 1 ಲಕ್ಷ 4 ನೂರಾ 94 ಎಕರೆ ವಿಸ್ತೀರ್ಣದ, ಜೀವವೈವಿಧ್ಯ ಉದ್ಯಾನಕ್ಕೆ, ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಹೆಸರನ್ನು, ನಾಮಾಂಕಿತ ಗೊಳಿಸಲಾಗಿದೆ ಎಂದು, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ಮಾಹಿತಿ ನೀಡಿರುವ ಸಚಿವರು, ಮಮದಾಪುರ ಉದ್ಯಾನ, 'ಶ್ರೀ ಸಿದ್ಧೇಶ್ವರ ಸ್ವಾಮೀಜಿ ಜೀವವೈವಿಧ್ಯ ಪರಂಪರೆ ತಾಣ' ಎಂದು ಇನ್ನು ಮುಂದೆ ಕರೆಯಲ್ಪಡಲಿದೆ, ಎಂದಿದ್ದಾರೆ.

<><><>

**ಮಂಗನ ಕಾಯಿಲೆಗೆ 2ನೇ ಹಂತದ ಲಸಿಕೆ ನೀಡುವ ಕುರಿತು**, ರಾಜ್ಯ ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ಹೊಸ ದಿಲ್ಲಿಯಲ್ಲಿ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ನಿರ್ದೇಶಕರನ್ನು ಭೇಟಿ ಮಾಡಿ, ಸಮಾಲೋಚಿಸಿದರು. ಮಂಗನ ಕಾಯಿಲೆಗೆ ಎರಡನೇ ಹಂತದ ಲಸಿಕಾ ಕಾರ್ಯಕ್ರಮ ರಾಜ್ಯದಲ್ಲಿ ಶೀಘ್ರ ಪ್ರಾರಂಭಿಸಲಾಗುವುದು. ಈ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡುವಂತೆ ICMR ನಿರ್ದೇಶಕರಿಗೆ ಮನವಿ ಮಾಡಲಾಗಿದೆ ಎಂದು, ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರದ, 2ನೇ ಆವೃತ್ತಿಯ, ರಕ್ತಹೀನತೆ ಮುಕ್ತ ಭಾರತ ಯೋಜನೆ ಅಡಿ, 'ರಕ್ತಹೀನತೆ ಮುಕ್ತ ಪೌಷ್ಟಿಕ ಕರ್ನಾಟಕ ಯೋಜನೆಗೆ', ICMR ನಿರ್ದೇಶಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಿಶೇ ʻವಾಗಿ ಸರ್ಕಾರಿ ಶಾಲೆ ಹಾಗೂ ಕಾಲೇಜಿನ ಮಕ್ಕಳನ್ನು, ರಕ್ತಹೀನತೆ ತಪಾಸಣೆಗೆ ಒಳಪಡಿಸಿ, ಸೂಕ್ತ ಚಿಕಿತ್ಸೆ ನೀಡುತ್ತಿರುವುದು ಉತ್ತಮ ಬೆಳವಣಿಗೆ ಎಂದು, ಶ್ಲಾಘಿಸಿದ್ದಾಗಿ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸಚಿವರು ಹೇಳಿದ್ದಾರೆ.

<><><>

**"ಉತ್ತಮ ಜೀವನ ಮತ್ತು ಉತ್ತಮ ಭವಿ ʼಷ್ಯಕ್ಕಾಗಿ,** ಆಹಾರದ ಹಕ್ಕು" ಎಂಬ ಧ್ಯೇಯದೊಂದಿಗೆ, ವಿಶ್ವ ಆಹಾರ ದಿನವನ್ನು, ಗದಗ ಜಿಲ್ಲೆ ಹುಲಕೋಟಿ ಗ್ರಾಮದ, ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಚರಿಸಲಾಯಿತು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾಕ್ಟರ್ ಆರ್.ವ್ಹಿ.ಹೆಗ್ಡೆ ಅವರು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿ, ಆಹಾರ ಸೇವನೆಯಲ್ಲಿ, ಹಣ್ಣು ಮತ್ತು ತರಕಾರಿಗಳ ಸೇವನೆಗೆ ಹೆಚ್ಚು ಒತ್ತು ನೀಡಬೇಕು ಎಂದರು. ಅಧ್ಯಕ್ಷತೆವಹಿಸಿದ್ದ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥೆ ಡಾಕ್ಟರ್ ಸುಧಾ ಮಂಕಣಿ ಸಿರಿಧಾನ್ಯಗಳು, ಬೇಳೆಕಾಳುಗಳು ಹಾಗೂ ಹಸಿರು ತರಕಾರಿಗಳನ್ನು ನಿತ್ಯ ಸೇವಿಸಬೇಕು, ಎಂದರು.

<><><>

**ಧಾರವಾಡ, ಗದಗ ಹಾಗೂ ಉತ್ತರಕನ್ನಡ ಜಿಲ್ಲೆಗಳ** ವ್ಯಾಪ್ತಿ ಹೊಂದಿರುವ, ಧಾರವಾಡದ, ಕರ್ನಾಟಕ ಹಾಲು ಒಕ್ಕೂಟ – ಕೆ.ಎಂ.ಎಫ್. ವತಿಯಿಂದ, ಧಾರವಾಡ ತಾಲೂಕು ಹಳ್ಳಿಗೇರಿಯ 35 ರೈತಾಪಿ ಕುಟುಂಬಗಳಿಗೆ, 3 ದಿನಗಳ ಹೈನುಗಾರಿಕೆ ತರಬೇತಿ ಶಿಬಿರವನ್ನು, ಡಾಕ್ಟರ್ ಗೋಪಾಲ ಕಮಲಾಪೂರ ನೇತೃತ್ವದ ಧಾರವಾಡದ ವಿವೇಕ ಜೀವನಾಧಾರ ಶಿಕ್ಷಣ ಕೇಂದ್ರ ಆಯೋಜಿಸಿತ್ತು. ಕೆ.ಎಂ.ಎಫ್. ನ ಪದ್ಮ ವಿಭೂಷಣ ವರ್ಗಿಸ್ ಕುರಿಯನ್ ಸಭಾಂಗಣದಲ್ಲಿ, 9ನೇ ಹೈನುಗಾರಿಕೆ ಪ್ರಶಿಕ್ಷಣ ಶಿಬಿರದ ಸಮಾರೋಪ ಸಮಾರಂಭ ಜರುಗಿತು. ಕೆ.ಎಂ.ಎಫ್.ನ ವ್ಯವಸ್ಥಾಪಕ ನಿರ್ದೇಶಕ, ಡಾಕ್ಟರ್ ವೀರೇಶ ತರ್ಲಿ ಮಾತನಾಡಿ, ಪರ್ಯಾಯ ಆದಾಯ ಮೂಲವಾದ ಹೈನುಗಾರಿಕೆ, ರಾಸುಗಳ ಆರೋಗ್ಯ ಮತ್ತು ಆರೈಕೆಯನ್ನು ಅವಲಂಬಿಸಿದೆ, ಎಂದರು.

<><><>

**ವೀರೇಶ ತರ್ಲಿ ಧ್ವನಿ 45 ಸೆಕೆಂದುಗಳು**

<><><>

**ಈಗ ಪ್ರಕಟಣೆ..**
**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**
**(42 ಸೆಕೆಂದುಗಳು)**
<><><>
**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**
<><><>

**ಕೊಡಗಿನ ತಲ ಕಾವೇರಿ ಕ್ಷೇತ್ರದಲ್ಲಿ,** ಇಂದು ತೀರ್ಥೋದ್ಭವವಾಗಲಿದೆ. ಇಂದು ಬೆಳಗ್ಗೆ 7 ಗಂಟೆ 40 ನಿಮಿಷಕ್ಕೆ ಸಲ್ಲುವ, 'ತುಲಾ' ಲಗ್ನದಲ್ಲಿ ಪವಿತ್ರ ತೀರ್ಥ ಕುಂಡಿಕೆಯಿಂದ, ಕಾವೇರಿ ಮಾತೆ ತೀರ್ಥ ಸ್ವರೂಪಿಣಿಯಾಗಿ ದರ್ಶನ ನೀಡಲಿದ್ದಾಳೆ. ತಲ ಕಾವೇರಿಯಲ್ಲಿ ಪವಿತ್ರ ತೀರ್ಥ ಕುಂಡಿಕೆಗೆ ಬೆಳ್ಳಿ ಆಭರಣದ ಅಲಂಕಾರ ಮಾಡಲಾಗಿದೆ. ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ, ಪುಣ್ಯ ಸ್ಥಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಭಗಂಡೇಶ್ವರ ದೇವಾಲಯ ಮತ್ತು ತಲ ಕಾವೇರಿ ಕ್ಷೇತ್ರದಲ್ಲಿ, ವಿಶೇಷ ಅಲಂಕಾರಗಳನ್ನು ಮಾಡಲಾಗಿದೆ.

<><><>

**ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಇಂದು,** ರಾಷ್ಟ್ರಾದ್ಯಂತ ಆಚರಿಸಲಾಗುತ್ತಿದೆ. ರಾಜ್ಯದ ಪ್ರಧಾನ ಕಾರ್ಯಕ್ರಮ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿತವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರಿನ ಶಾಸಕರ ಭವನದ ಆವರಣದಲ್ಲಿರುವ, ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿಗೆ, ಇಂದು ಬೆಳಗ್ಗೆ 9.30ಕ್ಕೆ ಮಾಲಾರ್ಪಣೆ ಮಾಡಿ, ಸಾಧಕರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ.

<><><>

**ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆಯ ಕಿಲಾರಿ ಜೋಗಯ್ಯ,** ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆಯ ಡಾಕ್ಟರ್ ರತ್ನಮ್ಮ ಎಸ್., ಬೆಳಗಾವಿ ಜಿಲ್ಲೆ, ಗಾಂಧಿನಗರದ ರಾಜಶೇಖರ ತಳವಾರ, ಬೆಂಗಳೂರಿನ ಕೆ.ಎಸ್. ಮೃತ್ಯುಂಜಯ, ವಿಜಯನಗರ ಜಿಲ್ಲೆ, ಹರಪನಹಳ್ಳಿಯ ರತ್ನಮ್ಮ ಸೋಗಿ ಅವರಿಗೆ, ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಸಂದಿದೆ.

<><><>

**ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಇಲಾಖೆ** ವತಿಯಿಂದ, ರಾಜ್ಯದ ಎಲ್ಲ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ, ವಾಲ್ಮೀಕಿ ಜಯಂತಿ ಆಚರಣೆಗೆ ಸಿದ್ಧತೆಗಳು ಪೂರ್ಣಗೊಂಡಿವೆ.

<><><>

**ಚಿತ್ರದುರ್ಗದ ಒನಕೆ ಓಬವ್ವ ಜಿಲ್ಲಾ ಕ್ರೀಡಾಂಗಣದಲ್ಲಿ,** ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಜ್ಯ ಮಟ್ಟದ ಜೂಡೋ ಪಂದ್ಯಾವಳಿ ಆಯೋಜಿಸಿತ್ತು. **ಬಾಲಕಿಯರ ನಾಲ್ಕು ಸುತ್ತಿನ** ವಿವಿಧ ಜುಡೋ ಸ್ಪರ್ಧೆಗಳಲ್ಲಿ, ಬಾಗಲಕೋಟೆಯ ಸ್ವಾತಿ, ಚಿಕ್ಕೋಡಿಯ ಅನುರಾಧಾ ಹಾಗೂ ಬೆಂಗಳೂರು ದಕ್ಷಿಣ ವಿಭಾಗದ ವರಲಕ್ಷ್ಮೀ ಚಿನ್ನದ ಪದಕ ಪಡೆದರು. **ಬಾಲಕರ ವಿಭಾಗದಲ್ಲಿ** ಬೆಳಗಾವಿಯ ಮನೋಜ್ ಸತ್ಯಪ್ಪ, ದಾವಣಗೆರೆಯ ವಿಕಾಸ್ ನಾಯ್ಕ್, ಕಲಬುರ್ಗಿಯ ಕೆ.ಆಶಿಶ್ ಪ್ರಥಮ ಸ್ಥಾನದೊಂದಿಗೆ, ಚಿನ್ನದ ಪದಕ ಗಳಿಸಿದರು. **ರಾಜ್ಯದ ವಿವಿಧ ಜಿಲ್ಲೆಗಳಿಂದ** 139 ಬಾಲಕರು, 101 ಬಾಲಕಿಯರು 9 ವಿಧದ ಜುಡೋ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. **ಚಿನ್ನದ ಪದಕ ಪಡೆದ 19 ಕ್ರೀಡಾಪಟುಗಳು,** ಡಿಸೆಂಬರ್ ಕೊನೆಯ ವಾರದಲ್ಲಿ ಪಂಜಾಬ್ ನಲ್ಲಿ ಆಯೋಜಿತ, ರಾಷ್ಟ್ರೀಯ ಜೂಡೋ ಕ್ರೀಡಾಕೂಟದಲ್ಲಿ ಭಾಗವಹಿಸಲು, ಅರ್ಹತೆ ಗಳಿಸಿದ್ದಾರೆ.

<><><>

**ಚಿಕ್ಕಮಗಳೂರಿನಲ್ಲಿ ಜರುಗಿದ,** ರಾಜ್ಯ ಮಟ್ಟದ ಟೇಕ್ವಾಂಡೋ ಪಂದ್ಯಾವಳಿಯಲ್ಲಿ, ಧಾರವಾಡದ ಬಾಲ ಬಳಗ ಶಾಲೆಯ, 8 ನೇ ತರಗತಿ ವಿದ್ಯಾರ್ಥಿ, ಹರ್ಷ ಸುಳ್ಳಳ್ಳಿ ಪ್ರಥಮ ಸ್ಥಾನ ಪಡೆದಿದ್ದಾರೆ. ಮಧ್ಯಪ್ರದೇಶದಲ್ಲಿ ಆಯೋಜಿತ, ರಾಷ್ಟ್ರ ಮಟ್ಟದ ಟೇಕ್ವಾಂಡೊ ಪಂದ್ಯಾವಳಿಯಲ್ಲಿ, ಹರ್ಷ ಸುಳ್ಳಳ್ಳಿ ರಾಜ್ಯವನ್ನು ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಹರ್ಷ ಸಂತಸ ಹಂಚಿಕೊಂಡಿದ್ದಾರೆ.

<><><>

**ಹರ್ಷ ಸುಳ್ಳಳ್ಳಿ ಧ್ವನಿ 25 ಸೆಕೆಂದುಗಳು**

<><><>

**ಬಂಗಾಳ ಕೊಲ್ಲಿಯಲ್ಲಿ,** ವಾಯುಭಾರ ಕುಸಿತದ ಹಿನ್ನೆಲೆ, ಬರುವ 24ರ ವರೆಗೆ, ರಾಜ್ಯದ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ, ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆಯ ನಿರ್ದೇಶಕ ಸಿ.ಎಸ್.ಪಾಟೀಲ ತಿಳಿಸಿದ್ದಾರೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಬರುವ 22ರ ವರೆಗೆ ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ 23ನೇ ತಾರೀಖಿನ ವರೆಗೆ, ಅಲ್ಲಲ್ಲಿ ಭಾರೀ ಮಳೆಯಾಗುವ ನಿರೀಕ್ಷೆ ಇದೆ ಎಂದು, ಅವರು ಮುನ್ಸೂಚನೆ ನೀಡಿದ್ದಾರೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

ಬಡತನ ನಿರ್ಮೂಲನೆಯ, ಅಂತಾರಾಷ್ಟ್ರೀಯ ದಿನಾಚರಣೆ ಇಂದು.

<><><>

**ಉಪ ಲೋಕಾಯುಕ್ತ, ನ್ಯಾಯಮೂರ್ತಿ** ಬಿ. ವೀರಪ್ಪ ಅವರು, ನಾಳೆಯಿಂದ ಮೂರು ದಿನ, ತುಮಕೂರು ಜಿಲ್ಲೆಗೆ ಭೇಟಿ ನೀಡಿ, ವಿವಿಧ ಇಲಾಖೆಗಳ ಪ್ರಕರಣಗಳನ್ನು ಪರಿಶೀಲಿಸಲಿದ್ದಾರೆ ಎಂದು, ಜಿಲ್ಲಾಧಿಕಾರಿ ಸುಭಾ ಕಲ್ಯಾಣ್ ತಿಳಿಸಿದ್ದಾರೆ. (11)

<><><>

**ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕಿನ,** ಇಡಗುಂದಿ ಗ್ರಾಮ ಪಂಚಾಯ್ತಿ ಮತ್ತು ಕುಂದರಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ, 'ಉದ್ಯೋಗ ಖಾತ್ರಿ ನಡಿಗೆ, ಸಬಲತೆ ಎಡೆಗೆ' ಅಭಿಯಾನ ಜರುಗಿತು.

<><><>

**ರಾಯಚೂರು ಜಿಲ್ಲೆ, ಸಿಂಧನೂರಿನ** ಇಂದಿರಾ ಕ್ಯಾಂಟಿನ್‌ಗೆ, ಜಿಲ್ಲಾಧಿಕಾರಿ ನಿತೀಶ್ ಭೇಟಿ ನೀಡಿ, ಆಹಾರದ ಗುಣಮಟ್ಟ ಪರಿಶೀಲಿಸಿದರು.

<><><>

**ಗದಗ ಜಿಲ್ಲೆಯಲ್ಲಿ,** ಕೃಷಿ ಸೇರಿದಂತೆ ಆದ್ಯತಾ ವಲಯಕ್ಕೆ, ಸಾವಿರದ 208 ಕೋಟಿ 32 ಲಕ್ಷ ರೂಪಾಯಿ ಸಾಲ ವಿತರಿಸಲಾಗಿದೆ ಎಂದು, ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ ಸಂತೋ ್ ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಮಂಗನ ಕಾಯಿಲೆ;** ಎರಡನೇ ಹಂತದ ಲಸಿಕೆ ಪೂರೈಕೆಗೆ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಗೆ ಮನವಿ – ದಿನೇಶ್ ಗುಂಡೂರಾವ್.
- **"ಉತ್ತಮ ಜೀವನ ಮತ್ತು ಭವಿ ್ಯಕ್ಕಾಗಿ,** ಆಹಾರದ ಹಕ್ಕು"; ಧ್ಯೇಯದೊಂದಿಗೆ, ವಿಶ್ವ ಆಹಾರ ದಿನಾಚರಣೆ.
- **ಕೊಡಗಿನ ತಲಕಾವೇರಿ ಕ್ಷೇತ್ರದಲ್ಲಿ,** ಇಂದು ಪವಿತ್ರ ತೀರ್ಥ ಉದ್ಭವ.
- **ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಇಂದು,** ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ.
- **ಚಿತ್ರದುರ್ಗದಲ್ಲಿ ರಾಜ್ಯ ಮಟ್ಟದ ಜುಡೋ ಪಂದ್ಯ;** ರಾಷ್ಟ್ರ ಮಟ್ಟಕ್ಕೆ 19 ಜುಡೋಪಟುಗಳು ಆಯ್ಕೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**